ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ಶ್ರೀಮತಿ ಬಿ. ಇಂದಿರಾ -ವಿರುದ್ಧ ಕರ್ನಾಟಕ ರಾಜ್ಯದ ಪರವಾಗಿ ಕಾರ್ಯದರ್ಶಿಗಳು ಕಂದಾಯ ಇಲಾಖೆ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 37447-448/2012, ಇದರೊಂದಿಗೆ ಇತರೆ, ದಿನಾಂಕ 9 ನೇ ಏಪ್ರಿಲ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:

ಭೂ ನ್ಯಾಯಾಧಿಕರಣ, ಬೆಳ್ತಂಗಡಿ ತಾಲ್ಲೂಕು-ಇದರಲ್ಲಿನ ಕಡತಕ್ಕೆ ಸಂಬಂಧಿಸಿದಂತೆ ಎಲ್ಆರ್ವೈ 3/78-79 ಹಾಗೂ ಎಲ್ಆರ್ವೈ 4/78 79 ರಲ್ಲಿದಿನಾಂಕ: 03.04.2012 ರ ಸಾಮಾನ್ಯ ಆದೇಶವನ್ನು ಪ್ರಶ್ನಿಸಿ ಈ ಎರಡು ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ.

2. ಈ ರಿಟ್ ಅರ್ಜಿಗಳಿಗೆ ಎಡೆ ಮಾಡಿ ಕೊಡುವಂತಹ ಸಂಕ್ಷಿಪ್ತ ವಾಸ್ತವಾಂಶಗಳು ಈ ಕೆಳಗಿನಂತಿವೆ:

ಎಲ್ಆರ್ವೈ 3/78-79ರಲ್ಲಿನ ವ್ಯವಹರಣೆಗಳು, ತಿಮ್ಮಯ್ಯ ಬಲ್ಲಾಳ್ ಇವರ ಮಗ ಬಿ. ನಿರಂಜನ್, ಸಲ್ಲಿಸಿದ್ದ, ಬೆಳ್ತಂಗಡಿ ತಾಲ್ಲೂಕಿನ ಕರಯ ಗ್ರಾಮದಲ್ಲಿರುವ ಭೂಮಿಯ 7 ಬಾಬುಗಳಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕುಗಳನ್ನು ಕೋರಿ ನಮೂನೆಸಂಖ್ಯೆ: 7 ರಲ್ಲಿದಿನಾಂಕ: 14.2.1979 ರ ಅರ್ಜಿಯನ್ನು ಅನುಸರಿಸಿಕೊಂಡು ನಡೆದಿರುತ್ತವೆ.ಎಲ್ಆರ್ವೈ 4/78-79ರಲ್ಲಿನ ವ್ಯವಹರಣೆಗಳು, ಶ್ರೀಮತಿ ರುಕ್ಮಿಣಿ ಸಲ್ಲಿಸಿದ್ದ, ಅದೇ ಬೆಳ್ತಂಗಡಿ ತಾಲ್ಲೂಕಿನ ಕರಯ ಗ್ರಾಮದಲ್ಲಿರುವ ಭೂಮಿಯ 9 ಬಾಬುಗಳಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕನ್ನು ಕೋರಿ ನಮೂನೆಸಂಖ್ಯೆ: 7 ರಲ್ಲಿದಿನಾಂಕ: 14.2.1979 ರ ಅರ್ಜಿಯನ್ನು ಅನುಸರಿಸಿಕೊಂಡು ನಡೆದಿರುತ್ತವೆ.ಒಪ್ಪಿಕೊಂಡಿರುವಂತೆ, ಮೇಲೆ ಹೇಳಿರುವ ವ್ಯವಹರಣೆಗಳಲ್ಲಿರುವ ಅರ್ಜಿದಾರರು ತಾಯಿ ಮತ್ತು ಮಗನಾಗಿದ್ದು, ಎರಡೂ ಅರ್ಜಿಗಳಲ್ಲಿಯೂ ಆಡಳಿತಾಧಿಕಾರಿ ಶ್ರೀಮತಿ ಚಂದ್ರಾವತಿ ಅಮ್ಮನವರ ಮೂಲಕ ' ಬವಂತುಬೆಟ್ಟು ಬಸ್ತಿ ಆದೀಶ್ವರ ಸ್ವಾಮಿ ', ಬವಂತು ಬೆಟ್ಟು, ಅಂಚೆ:ಕರಯ ಇವರು ಭೂ ಮಾಲೀಕರಾಗಿರುತ್ತಾರೆ.

3. ಒಪ್ಪಿಕೊಂಡಿರುವಂತೆ, ಮೇಲೆ ಹೇಳಿರುವ ನಮೂನೆಸಂಖ್ಯೆ: 7 ರಲ್ಲಿ ಸಲ್ಲಿಸಲಾಗಿರುವ ಅರ್ಜಿಗಳಿಗೆ ಸಂಬಂಧಿಸಿದ ಸ್ವತ್ತುಗಳು ಮೂಲವಾಗಿ ಆದಿರಾಜ ಪಾಂಡ್ಯ ಎಂಬಾತನಿಗೆ ಸೇರಿರುತ್ತದೆ.ಸದರಿ ಆದಿರಾಜ ಪಾಂಡ್ಯನಿಗೆ ( 1) ಚಂದ್ರಾವತಿ, ( 2) ರತ್ನಾವತಿ ಮತ್ತು ( 3) ರುಕ್ಮಿಣಿ ಎಂಬ ಮೂವರು ಪುತ್ರಿಯರಿರುತ್ತಾರೆ.ಅವನ ಜೀವಿತಾವಧಿಯಲ್ಲಿ, ಅವನು ತಾನು ಒಡೆತನವನ್ನು ಹೊಂದಿದ್ದ ಹಲವು ಸ್ವತ್ತುಗಳನ್ನು ಬೆಳ್ತಂಗಡಿ ತಾಲ್ಲೂಕಿನ ಉಪ್ಪಿನಂಗಡಿ ಗ್ರಾಮದ ಬವಂತು ಬೆಟ್ಟು ಎಂಬಲ್ಲಿರುವ ಆದೀಶ್ವರ ಸ್ವಾಮಿ ಬಸ್ತಿಗೆ ದಾನ ಮಾಡಿ,ದಿನಾಂಕ: 13.9.1913 ರಂದು ಒಂದು ನೋಂದಾಯಿತ ದಾನ ಪತ್ರವನ್ನು ಜಾರಿಗೊಳಿಸಿರುತ್ತಾನೆ.ಸದರಿ ದೇವಾಲಯವು ರಿಟ್ ಅರ್ಜಿಸಂಖ್ಯೆ: 37447-48/2012 ರಲ್ಲಿ ಮೂರನೇ ಪ್ರತ್ಯರ್ಜಿದಾರ ಆಗಿರುತ್ತದೆ.

ದಾನಪತ್ರಕ್ಕೆ ಸಂಬಂಧಪಟ್ಟಂತೆ, ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಎಲ್ಲಾ ಸ್ವತ್ತುಗಳನ್ನು ಆದಿರಾಜ ಪಾಂಡ್ಯನ ಹಿರಿಯ ಮಗಳಾದ ಚಂದ್ರಾವತಿಗೆ ನೋಡಿಕೊಳ್ಳಲು ಅಗತ್ಯಪಡಿಸಲಾಗಿತ್ತು.ಆಕೆಗೆ ಎಲ್ಲಾ ಭೂಮಿಗಳನ್ನು ದಾನವಾಗಿ ನೀಡಲಾಗಿದ್ದ ಮೇಲೆ ಹೇಳಿರುವ ದೇವಸ್ಥಾನವನ್ನು ನಿರ್ವಹಿಸಲು ಸದರಿ ಸ್ವತ್ತುಗಳಿಂದ ಪಡೆದ ಆದಾಯವನ್ನು ಬಳಸಿಕೊಳ್ಳಲು ಹಾಗೂ ತದನಂತರ ಸದರಿ ಸ್ವತ್ತುಗಳಿಂದ ಪಡೆದ ಉಳಿದ ಆದಾಯವನ್ನು ಆಕೆ ಆದಿರಾಜ ಪಾಂಡ್ಯನ ಕುಟುಂಬದ ಸದಸ್ಯರ ಎಂದರೆ ಅವನ ಮೂವರು ಪುತ್ರಿಯರು ಮತ್ತು ಅವರ ಮಕ್ಕಳ ಪ್ರಯೋಜನಕ್ಕಾಗಿ ಬಳಸಬೇಕೆಂದು ಅಗತ್ಯಪಡಿಸಲಾಗಿತ್ತು.

4. ದಾನಪತ್ರದಲ್ಲಿನ ಒಕ್ಕಣೆಗಳಿಗೆ ಅನುಸಾರವಾಗಿ ದಾನಿ ಆದಿರಾಜ ಪಾಂಡ್ಯನ ಮೊದಲ ಮಗಳಾದ ಚಂದ್ರಾವತಿಯು ದೇವಸ್ಥಾನದ ಪರವಾಗಿ ಇದ್ದ ಎಲ್ಲಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿರುತ್ತಾಳೆ.ಅದೇ ಸಮಯದಲ್ಲಿ, ದಿನಾಂಕ 01.03.1974 ರಿಂದ ಜಾರಿಗೆ ಬಂದಂಥ ಕರ್ನಾಟಕ ಭೂ ಸುಧಾರಣಾ ಅಧಿನಿಯಮಕ್ಕೆ

ಮಾಡಲಾದ ತಿದ್ದುಪಡಿಗೆ ಅನುಸಾರವಾಗಿ ಗೇಣಿದಾರರ ಸ್ವಾಧೀನ ಹಾಗೂ ಕೃಷಿಯಲ್ಲಿದ್ದ ಜಮೀನುಗಳು ರಾಜ್ಯ ಸರ್ಕಾರದೊಂದಿಗೆ ನಿಹಿತಗೊಂಡವು.ತದನಂತರ, ಕೃಷಿಕರಿಗೆ ಗೇಣಿದಾರನ ಸಾಮರ್ಥ್ಯದಲ್ಲಿ ತಮ್ಮ ಸಾಗುವಳಿಯಲ್ಲಿದ್ದ ಜಮೀನುಗಳಿಗೆ ಸಂಬಂಧಿಸಿದ ಅಧಿಭೋಗದ ಹಕ್ಕುಗಳನ್ನು ಕೋರುವುದಕ್ಕೆ ಅವಕಾಶ ನೀಡಲಾಗಿರುತ್ತದೆ.ಈ ಹಿನ್ನೆಲೆಯಲ್ಲಿ ಸುಮಾರು 42 ರಿಂದ 43 ಎಕರೆಗಳ ಜಮೀನಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕುಗಳನ್ನು ಕೋರಿ ಬಿ. ನಿರಂಜನ್ ಎಂಬಾತ ಮತ್ತು ಸುಮಾರು 18 ಎಕರೆಗಳ ವಿಸ್ತೀರ್ಣದ ಜಮೀನಿನ ಅಧಿಭೋಗದ ಹಕ್ಕುಗಳನ್ನು ಕೋರಿ ಆತನ ತಾಯಿ ಶ್ರೀಮತಿ ರುಕ್ಮಿಣಿ ಎಂಬಾಕೆ, ಇವರಿಬ್ಬರು ಎಲ್‌ಆರ್ 3/1978-79 ಹಾಗೂ ಎಲ್‌ಆರ್ 4/1978-79 ಗಳಲ್ಲಿ ಅ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

5. ಒಪ್ಪಿಕೊಂಡಿರುವಂತೆ, ಈ ಹಿಂದೆ ಹೇಳಿರುವ ನಡಾವಳಿಗಳಲ್ಲಿನ, ಅರ್ಜಿದಾರರ ಸಾಗುವಳಿಯಲ್ಲಿರುವ ಜಮೀನು ಎಂದು ಉಲ್ಲೇಖಿಸಲಾಗಿರುವ ಜಮೀನುಗಳು ಆದಿರಾಜ ಪಾಂಡ್ಯನುದಿನಾಂಕ: 13.09.1913 ರ ದಾಖಲಾದ ದಾನ ಪತ್ರದಡಿಯಲ್ಲಿ ಆದೀಶ್ವರ ಸ್ವಾಮಿ ಬಸದಿಗೆ ದಾನವಾಗಿ ನೀಡಲಾಗಿದ್ದ ಜಮೀನುಗಳಾಗಿದ್ದು, ಅವು ದಾನಿ ಆದಿರಾಜ ಪಾಂಡ್ಯನ ಹಿರಿಯ ಪುತ್ರಿಯ ಎಂದರೆ ಚಂದ್ರಾವತಿಯ ವಶದಲ್ಲಿದ್ದವು.ಬಿ. ನಿರಂಜನ್ ಹಾಗೂ ಆತನ ತಾಯಿ ರುಕ್ಮಿಣಿ ಸಲ್ಲಿಸಿದ್ದ ಅರ್ಜಿಯಲ್ಲಿ, ಅವರು ಈ ಹಿಂದೆ ಹೇಳಿರುವ ಜಮೀನುಗಳನ್ನು ದಾನವಾಗಿ ನೀಡಲಾಗಿರುವ ಬಸದಿಯ ಆಡಳಿತಗಾರರಾಗಿದ್ದುಕೊಂಡು ಚಂದ್ರಾವತಿ ಅಮ್ಮನವರು ತಮ್ಮ ಪರವಾಗಿ ನೀಡಿದ್ದ ಗೇಣಿ ಚೀಟಿಯ ಅಡಿಯಲ್ಲಿ ಗೇಣಿದಾರರಾಗಿ ತಾವು ಆ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದೇವೆಂದು ವಾದಿಸಿರುತ್ತಾರೆ.

6. ಬಿ. ನಿರಂಜನ್ನ ಅರ್ಜಿಯನ್ನುದಿನಾಂಕ: 25.9.1981 ರ ಆದೇಶದ ಮೂಲಕ ಜಮೀನುಗಳ 4 ಬಾಬುಗಳಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕುಗಳನ್ನು ಮಂಜೂರು ಮಾಡಿ, ಭಾಗಶಃ ಅಂಗೀಕರಿಸಲಾಗಿರುತ್ತದೆ.ಅಲ್ಲದೇ, ಶ್ರೀಮತಿ ರುಕ್ಮಿಣಿಯವರ ಅರ್ಜಿಯನ್ನು ಸಹ ಜಮೀನುಗಳ 7 ಬಾಬುಗಳಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕುಗಳನ್ನು ಮಂಜೂರು ಮಾಡಿ,ದಿನಾಂಕ: 01.10.1981 ರ ಆದೇಶದ ಮೂಲಕ ಭಾಗಶಃ ಅಂಗೀಕರಿಸಲಾಗಿರುತ್ತದೆ.

7. ಭೂ ನ್ಯಾಯಾಧಿಕರಣ, ಬೆಳ್ತಂಗಡಿಯ ಮೇಲೆ ಹೇಳಿರುವ ಆದೇಶಗಳು ಭೂ ಸುಧಾರಣಾ ಅಪೀಲು ಪ್ರಾಧಿಕಾರದ ಕಡತಗಳಲ್ಲಿನ ಎಲ್‌ಆರ್ಎ 777/1986 ರಲ್ಲಿನ ವಸ್ತು ವಿಷಯವಾಗಿರುತ್ತದೆ.ಭೂ ಸುಧಾರಣಾ ಅಧಿನಿಯಮದ 17 ನೇ ಪ್ರಕರಣಕ್ಕೆ ಮಾಡಿರುವ ತಿದ್ದುಪಡಿಯ ದೃಷ್ಟಿಯಿಂದ, ಸದರಿ ಅಪೀಲನ್ನು ಈ ನ್ಯಾಯಾಲಯಕ್ಕೆ ಸಿವಿಲ್ ಅರ್ಜಿಯಾಗಿ ಕಳುಹಿಸಲಾಗಿದ್ದು, ಅದನ್ನು ತರುವಾಯ ರಿಟ್ ಅರ್ಜಿಸಂಖ್ಯೆ: 20366/1992 ಆಗಿ ಪರಿವರ್ತಿಸಲಾಗಿರುತ್ತದೆ.ಸದರಿ ಅಪೀಲನ್ನು ರತ್ನಾವತಿಯ (ದಾನಿ ಆದಿರಾಜ ಪಾಂಡ್ಯನ ಎರಡನೇ ಮಗಳು) ಮಗಳಾದ ಶ್ರೀಮತಿ ಸರಸ್ವತಿ ಸಲ್ಲಿಸಿರುತ್ತಾಳೆ.ಅದರಲ್ಲಿ ಆಕೆಯು ಅರ್ಜಿದಾರರಾಗಿರುವ ಬಿ. ನಿರಂಜನ್ ಹಾಗೂ ಆತನ ತಾಯಿ ಶ್ರೀಮತಿ ರುಕ್ಮಿಣಿ ಇವರು ಬೇರಾರು ಆಗಿರದೇ ಅಪೀಲುದಾರಳಾಗಿರುವ ಸರಸ್ವತಿಯ ಸೋದರತ್ತೆಯ ಮಗ ಹಾಗೂ ಸೋದರತ್ತೆ ಆಗಿರುತ್ತಾರೆ ಎಂದು ಅವರು ಪ್ರಶ್ನಿತ ಜಮೀನಿನ ಗೇಣಿದಾರರಾಗಿಲ್ಲವೆಂದು; ಅವರು ಆದಿರಾಜ ಪಾಂಡ್ಯನ ಕುಟುಂಬದ ಸದಸ್ಯರಾಗಿರುತ್ತಾರೆಂದು; ಪ್ರಶ್ನಿತ ಜಮೀನಿಗೆ ಸಂಬಂಧಿಸಿದಂತೆ ಸದರಿ ವ್ಯಕ್ತಿಗಳಿಗೆ ಯಾವುದೇ ಗೇಣಿ ಹಕ್ಕನ್ನು ನೀಡಲಾಗಿರುವುದಿಲ್ಲವೆಂದು ಆಕೆ ವಾದಿಸಿದ್ದು, ತದನುಸಾರವಾಗಿ ಸದರಿ ಅರ್ಜಿಗಳನ್ನು ಅದೇ ಕುಟುಂಬದ ಸದಸ್ಯಳಾಗಿ ಆಕೆ ವಿರೋಧಿಸಿದ್ದು, ಅದನ್ನು ನ್ಯಾಯಾಧಿಕರಣವು ಪರಿಗಣಿಸಿರುವುದಿಲ್ಲ.

8. ಈ ನ್ಯಾಯಾಲಯದ ಕಡತದಲ್ಲಿ ರಿಟ್ ಅರ್ಜಿ 20366/1992 ರಲ್ಲಿ ರಿಟ್ ಅರ್ಜಿಯಾಗಿ ತರುವಾಯದಲ್ಲಿ ದಾಖಲಾಗಿರುವ ಸದರಿ ಅಪೀಲನ್ನು, ಕ್ರಮವಾಗಿದಿನಾಂಕ: 25.09.1981 ಹಾಗೂದಿನಾಂಕ: 01.10.1981 ರ ಎಲ್‌ಆರ್ 3 ಹಾಗೂ 4/1978-79ರಲ್ಲಿ ಭೂ ನ್ಯಾಯಾಧಿಕರಣದ ಆದೇಶವನ್ನು ರದ್ದುಗೊಳಿಸುವಲ್ಲಿದಿನಾಂಕ: 18.07.1998 ರ ಆದೇಶದ ಮೂಲಕ ಅಂಗೀಕರಿಸಲಾಗಿರುತ್ತದೆ.ತದನಂತರ ಎರಡೂ ಅರ್ಜಿಗಳನ್ನೂ ಸಹ, ಅವುಗಳನ್ನು ಅರ್ಜಿದಾರಳಾದ ಶ್ರೀಮತಿ ಸರಸ್ವತಿಗೆ ಸಾಕಷ್ಟು ಅವಕಾಶ ನೀಡಿದ ಬಳಿಕ, ಕಾನೂನಿನ ಅನುಸಾರವಾಗಿ ಆಲಿಸತಕ್ಕದ್ದು ಹಾಗೂ ವಿಲೇ ಮಾಡತಕ್ಕದ್ದು ಎಂಬ ಷರತ್ತಿನೊಂದಿಗೆ ಹೊಸ ಪರಿಗಣನೆಗಾಗಿ ನ್ಯಾಯಾಧಿಕರಣಕ್ಕೆ ಪುನರ್ವಿಚಾರಣೆಗಾಗಿ ವಾಪಸ್ ಕಳುಹಿಸಲಾಗಿರುತ್ತದೆ.

9. ಈ ಹಿಂದೆ ಹೇಳಿರುವ ಸಂದರ್ಭದಲ್ಲಿ, ಬಿ. ನಿರಂಜನ್ ಹಾಗೂ ಆತನ ತಾಯಿ ಶ್ರೀಮತಿ ರುಕ್ಮಿಣಿ ಇಬ್ಬರೂ ನಡಾವಳಿಸಂಖ್ಯೆ: ಎಲ್‌ಆರ್ವೈ 3 ಹಾಗೂ 4/1978-79 ಸಲ್ಲಿಸಿದ್ದ ನಮೂನೆಸಂಖ್ಯೆ: 7 ರಲ್ಲಿನ ಅರ್ಜಿಗಳನ್ನು ಭೂ

ನ್ಯಾಯಾಧಿಕರಣ, ಬೆಳ್ತಂಗಡಿ ತನ್ನದಿನಾಂಕ: 03.04.2012 ರ ಸಾಮಾನ್ಯ ಆದೇಶದ ಮೂಲಕ ಪುನರ್ವಿಚಾರಣೆಗೆ ಒಳಪಡಿಸಿ ಪುನರ್ ಪರಿಗಣನೆಗೆ ತೆಗೆದುಕೊಂಡಿರುತ್ತದೆ.ರತ್ನಾವತಿಯ ಮಗಳಾದ ಸರಸ್ವತಿ ಸಲ್ಲಿಸಿರುವ ರಿಟ್ ಅರ್ಜಿಸಂಖ್ಯೆ: 4131-32/2013 ಈ ಎರಡು ರಿಟ್ ಅರ್ಜಿಗಳಲ್ಲಿ ಸದರಿ ಆದೇಶವನ್ನು ಪ್ರಶ್ನಿಸಲಾಗಿದೆ.ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರಳಾದ ಸರಸ್ವತಿಯು ಎಲ್ಆರ್ 4/1978-79 ಎರಡರಲ್ಲಿಯೂ ಹೊರಡಿಸಲಾದ ಸಾಮಾನ್ಯ ಆದೇಶವನ್ನು ಪ್ರಶ್ನಿಸಿರುತ್ತಾಳೆ.ಅದಲ್ಲದೇ ರುಕ್ಮಿಣಿಯ (ಎಲ್ಆರ್ 4/78-79ರ ಮೂಲ ಅರ್ಜಿದಾರಳು) ಮಗಳಾದ ಶ್ರೀಮತಿ ಇಂದಿರಾ ರಿಟ್ ಅರ್ಜಿಸಂಖ್ಯೆ: 37447-48/2012 ರಲ್ಲಿ ಇನ್ನೊಂದು ರಿಟ್ ಅರ್ಜಿ ಸಲ್ಲಿಸಿದ್ದು, ಅದರಲ್ಲಿ 31 ಸೆಂಟ್ಸ್ ಅಳತೆಯ ಸರ್ವೆಸಂಖ್ಯೆ: 18/10 ಹಾಗೂ 1 ಎಕರೆ 80 ಸೆಂಟ್ಸ್ ಅಳತೆಯ ಸರ್ವೆಸಂಖ್ಯೆ: 18/9 ಪಿ .1 ಗಳ ಭೂಮಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕನ್ನು ಕೋರಿ ಮೂಲ ಅರ್ಜಿದಾರಳು ಸಲ್ಲಿಸಿದ್ದ ಪ್ರಾರ್ಥನೆಯನ್ನು ತಿರಸ್ಕರಿಸುವುದಕ್ಕೆ ಸ ಂ ಬ ಂ ಧಪಡುವಷ್ಟರ ಮಟ್ಟಿಗೆ ಅದನ್ನು ಈಗಾಗಲೇ ಭೂ ನ್ಯಾಯಾಧಿಕರಣ, ಬೆಳ್ತಂಗಡಿಯ ಕಡತದಲ್ಲಿನ ಎಲ್ಆರ್ವೈ 18/74-75ರಲ್ಲಿ ಸುಂದರ ಪೂಜಾರಿಯ ( ಈ ರಿಟ್ ಅರ್ಜಿಗಳಲ್ಲಿನ 5 ನೇ ಪ್ರತ್ಯರ್ಜಿದಾರಳ ಪತಿ) ಪರವಾಗಿ ಪರಿಗಣಿಸಲಾಗಿದೆ ಎಂಬ ಆಧಾರದಲ್ಲಿ ಎಲ್ಆರ್ವೈ 4/78-79ರಲ್ಲಿ ಹೊರಡಿಸಿದ ಆದೇಶವನ್ನು ಪ್ರಶ್ನಿಸಲಾಗಿರುತ್ತದೆ.ಒಪ್ಪಿಕೊಂಡಿರುವಂತೆ, ಇಂದಿರಾ ಬೇರಾರೂ ಆಗಿರದೇ ನಿರಂಜನ್ ಸಹೋದರಿಯಾಗಿದ್ದು, ಅವರಿಬ್ಬರೂ ದಿವಂಗತ ಆದಿರಾಜ ಪಾಂಡ್ಯನ ಮೊಮ್ಮಕ್ಕಳಾಗಿದ್ದಾರೆ.

10. ಆದ್ದರಿಂದ, ಈ ಎರಡೂ ರಿಟ್ ಅರ್ಜಿಗಳಲ್ಲಿ, ಎಲ್ಆರ್ವೈ 3/78-79ರಲ್ಲಿ ಹಾಗೂ ಎಲ್ಆರ್ವೈ 4/78-79ಗಳಲ್ಲಿ ಹೊರಡಿಸಲಾದ ಸಾಮಾನ್ಯ ಆದೇಶವನ್ನು ಪ್ರಶ್ನಿಸುತ್ತಿರುವ ವ್ಯಕ್ತಿಗಳು ಆದಿರಾಜ ಪಾಂಡ್ಯನ ಇಬ್ಬರು ಹೆಣ್ಣು ಮೊಮ್ಮಕ್ಕಳಾಗಿದ್ದಾರೆ.(ಸರಸ್ವತಿಯು ಆದಿರಾಜ ಪಾಂಡ್ಯನ ಎರಡನೇ ಮಗಳಾದ ರತ್ನಾವತಿಯ ಮಗಳಾಗಿದ್ದಾಳೆ) ಇಂದಿರಾ ಆದಿರಾಜ ಪಾಂಡ್ಯನ ಮೂರನೇ ಮಗಳಾದ ರುಕ್ಮಿಣಿಯ ಮಗಳಾಗಿರುತ್ತಾಳೆ.ಈ ಎರಡೂ ರಿಟ್ ಅರ್ಜಿಗಳನ್ನು ಆದಿರಾಜ ಪಾಂಡ್ಯನ ಇಬ್ಬರು ಹೆಣ್ಣು ಮೊಮ್ಮಕ್ಕಳು ಸಲ್ಲಿಸಿದ್ದರೂ ಸಹ, ಈ ಎರಡೂ ರಿಟ್ ಅರ್ಜಿಗಳಲ್ಲಿ ಮಂಡಿಸಲಾಗಿರುವ ಆಧಾರಾಂಶಗಳು ವಿಭಿನ್ನವಾಗಿವೆ.ಆದ್ದರಿಂದ, ಈ ನ್ಯಾಯಾಲಯವು ಮೊದಲನೆಯದಾಗಿ ಇಂದಿರಾ ಸಲ್ಲಿಸಿರುವ ರಿಟ್ ಅರ್ಜಿಗಳು ಕೈಗೆತ್ತಿಕೊಂಡಿರುತ್ತದೆ.

11. ರಿಟ್ ಅರ್ಜಿಸಂಖ್ಯೆ: 37447-48/2012 ರಲ್ಲಿ ಅರ್ಜಿದಾರಳು ಇಂದಿರಾ, ಬೆಳ್ತಂಗಡಿಯ ಭೂ ನ್ಯಾಯಾಧಿಕರಣದ ಕಡತದಲ್ಲಿನ ಎಲ್ಆರ್ವೈಸಂಖ್ಯೆ: 18/74-75ರಲ್ಲಿ ಸುಂದರ ಪೂಜಾರಿ ಎಂಬಾತನ ಪರವಾಗಿ ಈಗಾಗಲೇ ಪರಿಗಣಿಸಲಾಗಿದೆ ಎಂಬ ಆಧಾರದಲ್ಲಿ, 31 ಸೆಂಟ್ಸ್ ಅಳತೆಯ ಸರ್ವೆಸಂಖ್ಯೆ: 18/10 ಹಾಗೂ 1 ಎಕರೆ 80 ಸೆಂಟ್ಸ್ ಅಳತೆಯ ಸರ್ವೆಸಂಖ್ಯೆ: 18/9 ಪಿ .1 ಗಳಿಗೆ ಸಂಬಂಧಿಸಿ ಸಲ್ಲಿಸಿದ್ದ ಎಲ್ಆರ್ ವೈಸಂಖ್ಯೆ: 4/78-79ರಲ್ಲಿ ಅರ್ಜಿದಾರಳಾಗಿರುವ ತನ್ನ ತಾಯಿ ರುಕ್ಮಿಣಿಯ ಪರವಾಗಿ ಅಧಿಭೋಗದ ಹಕ್ಕುಗಳನ್ನು ತಿರಸ್ಕರಿಸಿ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸುತ್ತಿದ್ದಾಳೆ.

12. ರಿಟ್ ಅರ್ಜಿಸಂಖ್ಯೆ: 4131-32/2013 ರಲ್ಲಿ, ಬಿ. ನಿರಂಜನ್ ಹಾಗೂ ಆತನ ತಾಯಿ ರುಕ್ಮಿಣಿ ಇವರಿಬ್ಬರ ಪರವಾಗಿ ಅವರು ಭೂ ನ್ಯಾಯಾಧಿಕರಣ, ಬೆಳ್ತಂಗಡಿಯಲ್ಲಿ ಅಧಿಭೋಗದ ಹಕ್ಕುಗಳನ್ನು ಕೋರಿ ನಿರ್ದಿಷ್ಟ ವಿಸ್ತೀರ್ಣದ ಜಮೀನುಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದ ಅರ್ಜಿಗಳಿಗೆ ಸಂಬಂಧಿಸಿದಂತೆ ಭೂ ನ್ಯಾಯಾಧಿಕರಣವು ಹೊರಡಿಸಿರುವ ಸಾಮಾನ್ಯ ಆದೇಶವನ್ನು ಪ್ರಶ್ನಿಸಿರುತ್ತದೆ.ಅದರಲ್ಲಿ ಅರ್ಜಿದಾರಳಾದ ಶ್ರೀಮತಿ ಸರಸ್ವತಿ, ನಮೂನೆಸಂಖ್ಯೆ: 7 ರಲ್ಲಿನ ನಡೆವಳಿಗಳ ವಸ್ತು ವಿಷಯವಾಗಿರುವ ಜಮೀನುಗಳನ್ನು ನಿರಂಜನ್ ಆಗಲೀ, ಆತನ ತಾಯಿ ರುಕ್ಮಿಣಿಯಾಗಲೀ ಗೇಣಿದಾರರಾಗಿ ಎಂದಿಗೂ ಸಾಗುವಳಿ ಮಾಡಿರುವುದಿಲ್ಲವೆಂದು ವಾದಿಸಿರುತ್ತಾಳೆ.ಅವರು ಆದಿರಾಜ ಪಾಂಡ್ಯನ ಹಿರಿಯ ಮಗಳಾದ ಚಂದ್ರಾವತಿಯೊಂದಿಗೆ ವಾಸಿಸುತ್ತಿದ್ದು, ಜಮೀನನ್ನು ಅವರು ನಿರ್ವಹಿಸುತ್ತಿದ್ದುದರಿಂದ ಅವರು ಜಮೀನಿನ ಸ್ವಲ್ಪ ಭಾಗದ ಗೇಣಿಯನ್ನು ಕ್ಲೇಮು ಮಾಡುತ್ತಿರುವುದನ್ನು ಅಂಗೀಕರಿಸಲಾಗದು.ಈ ಆಧಾರಾಂಶದ ಮೇಲೆ ಸದರಿ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ.

13. ಈ ಎರಡು ರಿಟ್ ಅರ್ಜಿಗಳನ್ನು ಎಲ್ಆರ್ಸಂಖ್ಯೆ: 4/78-79ರಲ್ಲಿ ಅರ್ಜಿದಾರಳಾದ ರುಕ್ಮಿಣಿಯ ಕಾನೂನು ಸಮ್ಮತ ವಾರಸುದಾರಳಾಗಿ ಶ್ರೀಮತಿ ಇಂದಿರಾ ಸಲ್ಲಿಸಿರುವ ರಿಟ್ ಅರ್ಜಿಸಂಖ್ಯೆ: 37447-448/2012 ರಲ್ಲಿನ ರಿಟ್ ಅರ್ಜಿಗಳ ಮೊದಲನೇ ಸರಣಿಯಲ್ಲಿ ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳಾದ ಶ್ರೀ ಸುಕುಮಾರ್ ಜೈನ್ ಹಾಗೂ ನಿರಂಜನ್ ಮತ್ತು ಆತನ ತಾಯಿ ರುಕ್ಮಿಣಿ ಇಬ್ಬರ ಪರವಾಗಿಯೂ ಎಲ್ಆರ್ಸಂಖ್ಯೆ:

3 ಹಾಗೂ 4/1978-79ರಲ್ಲಿ ಜಮೀನಿನ ಕೆಲವು ಭಾಗವನ್ನು ಮಂಜೂರು ಮಾಡಿರುವುದನ್ನು ಪ್ರಶ್ನಿಸುತ್ತಿರುವ, ರಿಟ್ ಅರ್ಜಿಸಂಖ್ಯೆ: 4131-32/2013 ರಲ್ಲಿನ ಅರ್ಜಿದಾರಳಾದ ಶ್ರೀಮತಿ ಸರಸ್ವತಿಯ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳಾದ ಶ್ರೀ ವಿ.ವಿ. ಹೆಗ್ಡೆ ಇವರಿಬ್ಬರ ಸಮ್ಮುಖದಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

14. ಇಬ್ಬರೂ ಅರ್ಜಿದಾರರ ಮಾನ್ಯ ನ್ಯಾಯವಾದಿಗಳ ಹಾಗೂ ಮಾನ್ಯ ಸರ್ಕಾರಿ ವಕೀಲರಾದ ಶ್ರೀ ಬೂದಿಹಾಳ್ ಅವರ ವಾದಗಳನ್ನು ಆಲಿಸಲಾಗಿದೆ.ಒಂದು ಅರ್ಜಿಯಲ್ಲಿನ 5 ನೇ ಪ್ರತ್ಯರ್ಜಿದಾರಳಾಗಿರುವ ಮೃತ ಸುಂದರ ಪೂಜಾರಿಯ ವಿಧವೆ ಪತ್ನಿ ಶ್ರೀಮತಿ ಲೀಲಾ ಪ್ರತಿನಿಧಿಸಿದ್ದುದರಿಂದ ಆತನ ಪರವಾಗಿ ಈಗಾಗಲೇ ಅವುಗಳನ್ನು ಮಂಜೂರು ಮಾಡಲಾಗಿದೆ ಎಂಬ ಆಧಾರದಲ್ಲಿ ಜಮೀನಿನ ಎರಡು ಬಾಬುಗಳಿಗಾಗಿ ಅರ್ಜಿದಾರಳಾದ ಇಂದಿರಾಳ ತಾಯಿ ರುಕ್ಮಿಣಿಯ ಪ್ರಾರ್ಥನೆಯನ್ನು ನ್ಯಾಯಾಧಿಕರಣವು ತಿರಸ್ಕರಿಸಿರುತ್ತದೆ ಎಂಬುದು ರುಕ್ಮಿಣಿಯು ಪ್ರಶ್ನಿತ ಆದೇಶವನ್ನು ವಿರೋಧಿಸುತ್ತಿರುವುದಕ್ಕೆ ಒಂದು ಮುಖ್ಯ ಕಾರಣವಾಗಿರುತ್ತದೆ.ಸುಂದರ ಪೂಜಾರಿ ಎಲ್ಆರ್ 18/78-79ರಲ್ಲಿ ಸಲ್ಲಿಸಿರುವ ಅರ್ಜಿಯನ್ನು 31 ಸೆಂಟ್ಸ್ ಅಳತೆಯ ಸರ್ವೆಸಂಖ್ಯೆ: 18/10 ಹಾಗೂ 1 ಎಕರೆ 80 ಸೆಂಟ್ಸ್ ಅಳತೆಯ 18/9 ಪಿ -1 ಎಂಬ ಎರಡು ಜಮೀನುಗಳಿಗೆ ಸಂಬಂಧಸಿದಂತೆ, ರುಕ್ಮ್ಮಿಣಿಯು ಅದೇ ಜಮೀನುಗಳಿಗೆ ಸಂಬಂಧಿಸಿದಂತೆ, ಅಧಿಭೋಗದ ಹಕ್ಕನ್ನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಉಲ್ಲೇಖಿಸದೆಯೇ, ಆತನ ಪರವಾಗಿ ಪರಿಗಣಿಸಲಾಗಿರುತ್ತದೆ ಎಂದು ವಾದಿಸಲಾಗಿದೆ. ವರದಿಯಾಗಿರುವ ' ಬಸಪ್ಪ ಗುರುಸಿಂಗಪ್ಪ ವಿರುದ್ಧ ಭೂ ನ್ಯಾಯಾಧಿಕರಣ-1972 ( 2) ಕೆಎಲ್ಜೆ 370, ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಮಾನದ ಹಿನ್ನಲೆಯಲ್ಲಿ ಸದರಿ ಪ್ರಕ್ರಿಯೆಯು ದೋಷದಿಂದ ಕೂಡಿದೆ ಎಂದು ವಾದಿಸಲಾಗಿದೆ.

ಆ ಪ್ರಕರಣದಲ್ಲಿ ವಿಭಾಗೀಯ ಪೀಠವು ಪ್ಯಾರಾ -11 ರಲ್ಲಿ ಈ ಕೆಳಗಿನಂತೆ ಅ ಅಭಿಪ್ರಾಯ ಪಟ್ಟಿರುತ್ತದೆ:

" ಒಂದೇ ಜಮೀನಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕಿನ ಮಂಜೂರಾತಿಗಾಗಿ ನ್ಯಾಯಾಧಿಕರಣದಲ್ಲಿ ಪರಸ್ಪರ ವಿರುದ್ಧ ಅರ್ಜಿಗಳನ್ನು ಸಲ್ಲಿಸಿರುವಾಗ; ನಮ್ಮ ಅಭಿಪ್ರಾಯದಲ್ಲಿ, ಆ ಪರಸ್ಪರ ವಿರುದ್ಧ ಅರ್ಜಿಗಳನ್ನು ಜೊತೆಯಲ್ಲಿ ಪರಿಗಣಿಸಿ, ಒಂದು ಸಾಮಾನ್ಯ ಆದೇಶದ ಮೂಲಕ ಅವುಗಳನ್ನು ತೀರ್ಮಾನಿಸುವುದು ನ್ಯಾಯಾಧಿಕರಣದ ಕರ್ತವ್ಯವಾಗಿರುತ್ತದೆ.ಹಾಗಿಲ್ಲದಿದ್ದರೆ, ಪರಸ್ಪರ ವಿರೋಧಿ ಕ್ಲೇಮುಗಳನ್ನು ಸಮರ್ಪಕವಾಗಿ ನ್ಯಾಯ ನಿರ್ಣಯ ಮಾಡುವುದಕ್ಕೆ ಸಾಧ್ಯವಿರುವುದಿಲ್ಲ.ಒಂದೊಮ್ಮೆ ಆ ಪರಸ್ಪರ ವಿರೋಧಿ ಅರ್ಜಿದಾರರಲ್ಲಿ ಒಬ್ಬರು ತಮ್ಮ ಅರ್ಜಿಯನ್ನು ಮುಂಚಿತವಾಗಿಯೇ ಸಲ್ಲಿಸಿದ್ದು, ನ್ಯಾಯಾಧಿಕರಣವು ಆ ಭೂಮಿಗೆ ಹಾಗೂ ಆ ಮುಂಚಿತವಾಗಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಅವರಿಗೆ ಅಧಿಭೋಗದ ಹಕ್ಕನ್ನು ಮಂಜೂರು ಮಾಡಿದ್ದರೂ ಸಹ ಅದು ಸಾಧ್ಯವಿರುವುದಿಲ್ಲ.ಅಧಿನಿಯಮವು ಉಪಬಂಧಿಸಿರುವ ಕಾಲ ಪರಿಮಿತಿಯೊಳಗೆ ಸಲ್ಲಿಸಲಾಗಿರುವ ಪ್ರತಿಯೊಂದು ಅರ್ಜಿಯನ್ನೂ ಪರಿಗಣಿಸುವುದಕ್ಕೆ ನ್ಯಾಯಾಧಿಕರಣವು ಬದ್ಧವಾಗಿರುತ್ತದೆ ಮತ್ತು ಆ ಭೂಮಿಯು ಅದರಲ್ಲಿನ ಅಧಿಭೋಗದ ಹಕ್ಕಿನ ಮಂಜೂರಾತಿಗೆ ಲಭ್ಯವಿರುವುದಿಲ್ಲ ಎಂದು ಹೇಳುವುದು ಅಂತಹ ಅರ್ಜಿಗೆ ಸಮರ್ಪಕವಾದ ಉತ್ತರವಾಗಿರುವುದಿಲ್ಲ.ಮತ್ತೊಂದು ಅರ್ಜಿಯನ್ನು ನ್ಯಾಯಾಧಿಕರಣವು ಪರಿಗಣಿಸುವುದಕ್ಕೆ ಇರುವ ಏಕಮಾತ್ರ ಮಾರ್ಗವೆಂದರೆ, ಅದರ ಹಿಂದಿನ ಆದೇಶವನ್ನು ರದ್ದುಗೊಳಿಸಿ ಆ ಎರಡೂ ಪರಸ್ಪರ ವಿರೋಧಿ ಅರ್ಜಿಗಳನ್ನು ಜೊತೆಯಾಗಿ ಪರಿಗಣಿಸಿ, ಮುಂದಿನ ತೀರ್ಮಾನ ಕೈಗೊಳ್ಳುವುದಕ್ಕೆ ಅದಕ್ಕೆ (ನ್ಯಾಯಾಧಿಕರಣಕ್ಕೆ) ನಿರ್ದೇಶಿಸುವುದಾಗಿದೆ.ನ್ಯಾಯಾಧಿಕರಣದಿಂದ ಅದು ನೀಡಲ್ಪಟ್ಟಾಗ ಊರ್ಜಿತವಾಗಿದ್ದ ಹಾಗೂ ಯಾವುದೇ ಆಶಕ್ತತೆಯನ್ನು ಅನುಭವಿಸದಿದ್ದ ಆದೇಶವನ್ನು ನ್ಯಾಯಾಧಿಕರಣವು ಹಿಂದಿನ ಅರ್ಜಿದಾರನಿಗೆ ಆ ಭೂಮಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕನ್ನು ಮಂಜೂರು ಮಾಡಿದ ತರುವಾಯ ಅದೇ ಭೂಮಿಗೆ ಸಂಬಂಧಿಸಿದಂತೆ ಇನ್ನೊಬ್ಬ ವ್ಯಕ್ತಿಯು ಒಂದು ವಿರೋಧಿ ಅರ್ಜಿಯನ್ನು ಸಲ್ಲಿಸಿದ್ದಾನೆ ಎಂಬ ಕಾರಣ ಮಾತ್ರದಿ ಂ ದ ರದ್ದುಗೊಳಿಸಬೇಕಾಗಿರುತ್ತದೆ ಎಂಬುದು ಅಚ್ಚರಿ ಹುಟ್ಟಿಸುವಂತೆ ಕಂಡು ಬರಬಹುದು.ಆದರೆ ನ್ಯಾಯಾಧಿಕರಣವು ಕ್ಲುಪ್ತ ಸಮಯದಲ್ಲಿ ಸಲ್ಲಿಸಲಾಗಿರುವ ಎಲ್ಲಾ ಅರ್ಜಿಗಳನ್ನು ಪರಿಗಣಿಸುವಲ್ಲಿ ತನ್ನ ಬಾಧ್ಯತೆಯನ್ನು ನಿರ್ವಹಿಸಲು ಸಾಧ್ಯವಾಗುವ ಬೇರೆ ಯಾವುದೇ ಮಾರ್ಗವಿರುವುದಿಲ್ಲ.

15. ಈ ಹಿಂದೆ ಹೇಳಿರುವ ತೀರ್ಪನ್ನು ಪರಿಶೀಲಿಸಿದಾಗ, ಒಂದೇ ಭೂಮಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕನ್ನು ಕೋರಿ ಒಂದಕ್ಕಿಂತ ಹೆಚ್ಚು ಅರ್ಜಿಗಳಿರುವಂಥ ದತ್ತ ಸಂಗತಿಗಳಲ್ಲಿ, ಭೂ ನ್ಯಾಯಾಧಿಕರಣವು ಎಲ್ಲಾ ಅರ್ಜಿಗಳನ್ನು ಜೊತೆಯಲ್ಲಿ 0 ಪರಿಗಣಿಸಿರುವುದಿಲ್ಲವೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.ಒಂದೊಮ್ಮೆ

ಅವುಗಳಲ್ಲಿ ಒಂದು ಅರ್ಜಿಯನ್ನಾದರೂ ಒಬ್ಬ ಅರ್ಜಿದಾರನ ಪರವಾಗಿ ಅಧಿಭೋಗದ ಹಕ್ಕುಗಳನ್ನು ಮಂಜೂರು ಮಾಡಿ ಈಗಾಗಲೇ ತೀರ್ಮಾನಿಸಲಾಗಿರುತ್ತದೆಯೆಂದು ಪೂರ್ವಭಾವನೆ ಮಾಡಿಕೊಂಡರೂ ಸಹ, ಅದನ್ನು ವಾಪಸ್ಸು ತರಿಸಿಕೊಳ್ಳಬೇಕಾಗಿತ್ತು ಹಾಗೂ ತದನಂತರ ಭೂ ನ್ಯಾಯಾಧಿಕರಣವು ಎಲ್ಲಾ ಅರ್ಜಿಗಳನ್ನು ಜೊತೆಯಲ್ಲಿ ಪರಿಗಣಿಸಬೇಕಾಗಿತ್ತು.ಆದ್ದರಿಂದ, ನ್ಯಾಯಾಧಿಕರಣವು ಗಂಭೀರವಾದ ತಪ್ಪನ್ನು ಎಸಗಿರುತ್ತದೆ.ಈ ಹಿಂದೆ ಉಲ್ಲೇಖಿಸಿರುವ ತೀರ್ಪು, ಇಲ್ಲಿ ಎತ್ತಲಾಗಿರುವ ತಾಂತ್ರಿಕ ಆಕ್ಷೇಪಣೆಯನ್ನು ಪ್ರಾಮಾಣಿಕವಾಗಿ ಸಮರ್ಥಿಸುತ್ತಿದೆ.

16. ಆದ್ದರಿಂದ, ಶ್ರೀಮತಿ ಇಂದಿರಾ ಸಲ್ಲಿಸಿರುವ ರಿಟ್ ಅರ್ಜಿಗಳನ್ನು ಅಂಗೀಕರಿಸುವುದು ಅಗತ್ಯವಾಗಿರುತ್ತದೆ ಹಾಗೂ ಹಾಗೆ ಮಾಡುವಾಗ,ದಿನಾಂಕ: 22.09.1977 ರ ಎಲ್ಆರ್ವೈ 18/1974-75ರಲ್ಲಿ ಹೊರಡಿಸಲಾದ ಆದೇಶವನ್ನು ಮತ್ತುದಿನಾಂಕ: 3.4.2012 ರ ಎಲ್ಆರ್ಸಂಖ್ಯೆ: 4/78-79ರಲ್ಲಿ ಹೊರಡಿಸಲಾದ ಆದೇಶವನ್ನು ರದ್ದುಪಡಿಸುವುದು ಅಗತ್ಯವಾಗಿರುತ್ತದೆ ಹಾಗೂ ಆ ವಿಷಯವನ್ನು 31 ಸೆಂಟ್ಸ್ ಅಳತೆಯ ಸರ್ವೆಸಂಖ್ಯೆ: 18/10 ಹಾಗೂ 1 ಎಕರೆ 80 ಸೆಂಟ್ಸ್ ಅಳತೆಯ ಸರ್ವೆಸಂಖ್ಯೆ: 18/9 ಪಿ .1 ಭೂಮಿಗಳಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕನ್ನು ಕೋರಿ ರುಕ್ಮಿಣಿ ಸಲ್ಲಿಸಿರುವ ಪ್ರಾರ್ಥನೆಯನ್ನು ಮರು ಪರಿಗಣನೆಗಾಗಿ ಭೂ ನ್ಯಾಯಾಧಿಕರಣಕ್ಕೆ ವಾಪಾಸ್ ಕಳುಹಿಸುವುದು ಅಗತ್ಯವಾಗಿರುತ್ತದೆ.

17. ಶ್ರೀಮತಿ ಸರಸ್ವತಿ ಸಲ್ಲಿಸಿರುವ ಪರಸ್ಪರ ಸಂಬಂಧಿಸಿರುವ ರಿಟ್ ಅರ್ಜಿಗಳಿಗೆ ಸಂಬಂಧಪಟ್ಟಷ್ಟರ ಮಟ್ಟಿಗೆ, ಗೇಣಿದಾರ ಮತ್ತು ಭೂ ಮಾಲೀಕ ಹಾಗೂ ಹಿಂದೆ ಹೇಳಿರುವ ಅರ್ಜಿಯಲ್ಲಿನ ಅರ್ಜಿದಾರರು ಮತ್ತು ದೇವಸ್ಥಾನದ ನಡುವೆ ಯಾವುದೇ ಸಂಬಂಧವಿರುವುದಿಲ್ಲ; ಹಾಗೂ ಸದರಿ ಅರ್ಜಿಗಳನ್ನು ಕುಟುಂಬದ ಪ್ರಯೋಜನಕ್ಕಾಗಿ ಲಭ್ಯವಿರುವ ಆಸ್ತಿಯನ್ನು ತಮ್ಮ ಪ್ರತ್ಯೇಕ ಉಪಯೋಗಕ್ಕಾಗಿ ಕಬಳಿಸುವ ಸಲುವಾಗಿ ಗುಪ್ತ ಉದ್ದೇಶದಿಂದ ಸಲ್ಲಿಸಲಾಗಿರುತ್ತದೆ ಎಂಬ ಆಧಾರಗಳ ಮೇಲೆ, ಕೆಲವು ಭೂಮಿಗಳಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕುಗಳನ್ನು ಕೋರಿ ಆಕೆಯ ಸೋದರತ್ತೆಯ ಮಗ ಬಿ. ನಿರಂಜನ್ ಹಾಗೂ ಆತನ ತಾಯಿ ಶ್ರೀಮತಿ ರುಕ್ಮಿಣಿ ಮತ್ತು ಕೆಲವು ಇತರ ಭೂಮಿಗಳಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕುಗಳನ್ನು ಕೋರಿ ಆಕೆಯ ಸೋದರತ್ತೆ ಶ್ರೀಮತಿ ರುಕ್ಮಿಣಿ ಇವರು ಸಲ್ಲಿಸಿದ್ದ ಎಲ್ಆರ್ 3/1978-79 ಹಾಗೂ ಎಲ್ಆರ್ 4/1978-79ಗಳಲ್ಲಿ ಭೂ ನ್ಯಾಯಾಧಿಕರಣವು ಹೊರಡಿಸಿರುವ ಸಾಮಾನ್ಯ ಆದೇಶಕ್ಕೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಎತ್ತಲಾಗಿರುತ್ತದೆ.

18. ಈ ರಿಟ್ ಅರ್ಜಿಗಳನ್ನು ಆಲಿಸಿದಾಗ, ನ್ಯಾಯಾಧಿಕರಣದ ಮುಂದಿಟ್ಟಿರುವ ವ್ಯವಹರಣೆಗಳಲ್ಲಿನ ದಾಖಲೆಗಳನ್ನು ಪರಿಶೀಲಿಸಿದಾಗ, ಬಿ. ನಿರಂಜನ್ ಎಲ್ಲಕ್ಕಿಂತ ಮುಂಚಿತವಾಗಿ ನ್ಯಾಯಾಧಿಕರಣದ ಮುಂದೆ ಮಂಡಿಸಿರುವ ಸಾಕ್ಷ್ಯಗಳಿಂದ ಕಂಡು ಬಂದಿರುವಂತೆ, ಎಲ್ಆರ್ವೈ ಸಂ:3/1978-79ರಲ್ಲಿನ ಅರ್ಜಿದಾರನಾದ ಬಿ. ನಿರಂಜನ್ ಎಂಬಾತನು ಆಧೀಶ್ವರಸ್ವಾಮಿ ಬಸದಿ ದೇವಸ್ಥಾನವನ್ನು ವಾಸ್ತವವಾಗಿ ವ್ಯವಸ್ಥಾಪಕನಾಗಿ ತನ್ನ ಸೋದರತ್ತೆ ಚಂದ್ರಾವತಿಗೆ ಸಹಾಯ ಮಾಡುತ್ತಿದ್ದ ವ್ಯಕ್ತಿಯಾಗಿದ್ದು, ಆತನು ಭೂಮಿಯು ಕುಟುಂಬದ ಪ್ರಯೋಜನಕ್ಕಾಗಿ ತನ್ನ ಸೋದರತ್ತೆ ಚಂದ್ರಾವತಿಯ ಮೇಲ್ವಿಚಾರಣೆಯಲ್ಲಿರುತ್ತದೆ ಹಾಗೂ ತಾನು ಆಕೆಗೆ ಸದರಿ ಭೂಮಿಗಳನ್ನು ನಿರ್ವಹಿಸುವಲ್ಲಿ ಸಹಕರಿಸುತ್ತಿದ್ದನು ಎಂದು ದಾಖಲೆಯಲ್ಲಿ ಹಾಜರುಪಡಿಸುವ ಅ ಮಟ್ಟಿಗೆ ಹೋಗಿರುತ್ತಾನೆ ಎಂಬುದು ಬಹಿರಂಗವಾಗಿರುತ್ತದೆ.ಸಾಕ್ಷ್ಯದಲ್ಲಿ, ತನ್ನ ತಾಯಿ ರುಕ್ಮಿಣಿ ಹಾಗೂ ತನ್ನ ಸೋದರತ್ತೆ ಚಂದ್ರಾವತಿ ಎಲ್ಲರೂ ಒಂದೇ ಮನೆಯಲ್ಲಿ ವಾಸವಾಗಿರುತ್ತಾರೆ ಮತ್ತು ಅವರು ಒಂದೇ ಕುಟು ೦ ಬದ ಸದಸ್ಯರಾಗಿರುತ್ತಾರೆ ಎಂದೂ ಸಹ ಆತನು ಎರಡು ಬೇರೆ ಬೇರೆ ಕಡೆಗಳಲ್ಲಿ ಒಪ್ಪಿಕೊಂಡಿರುತ್ತಾನೆ.ಆದ್ದರಿಂದ, ಸಂದರ್ಭ ಹೀಗಿರುವಾಗ, ನ್ಯಾಯಾಧಿಕರಣವು ದೇವಸ್ಥಾನದ ಎಂದರೆ ಆಧೀಶ್ವರಸ್ವಾಮಿ ಬಸದಿಯ ಪರವಾಗಿ ಆ ಸ್ವತ್ತನ್ನು ನಿರ್ವಹಿಸುವ ಜವಾಬ್ದಾರಿಯನ್ನು ಆತನಿಗೆ ನೀಡಿದ್ದ ಕುಟುಂಬಕ್ಕೆ ಸೇರಿರುವ ಸ್ವತ್ತಿಗೆ ಆತನನ್ನು ಗೇಣಿದಾರನೆಂದು ಹೇಗೆ ಒಪ್ಪಿಕೊಳ್ಳಲು ಸಾಧ್ಯ?ಎಂಬುದನ್ನು ಒಂದು ಆಧಾರಾಂಶವಾಗಿ ಅರ್ಜಿದಾರಳು ವಾದಿಸಿರುತ್ತಾಳೆ.ಆಕೆ ಸಲ್ಲಿಸಿರುವ ರಿಟ್ ಅರ್ಜಿಗಳಲ್ಲಿನ ಅನುಬಂಧ-ಹೆಚ್ ನಲ್ಲಿರುವದಿನಾಂಕ: 13.9.1913 ರಂದು ದಾನಿಯಾದ ಆದಿರಾಜ ಪಾಂಡ್ಯನು ಜಾರಿಗೊಳಿಸಿರುವ ದಾನ ಪತ್ರದ ಪ್ರಕಾರ ಕುಟುಂಬದ ಸದಸ್ಯರಿಗೆ ಕೆಲವೊಂದು ಪ್ರಯೋಜನಗಳನ್ನು ನೀಡಲಾಗಿರುವಲ್ಲಿ, ಬಸದಿಗೆ ದಾನವಾಗಿ ನೀಡಿರುವ ಸ್ವತ್ತುಗಳಿಗೆ ಸಂಬಂಧಿಸಿದಂತೆ ರುಕ್ಮಿಣಿ ಹಾಗೂ ಆಕೆಯ ಮಗ ನಿರಂಜನ್ರು ತಾವು ಗೇಣಿದಾರರೆಂಬ ಕ್ಲೇಮನ್ನು ಅಂಗೀಕರಿಸುವುದು ಸಾಧ್ಯವಿರುವುದಿಲ್ಲ ಎಂಬುದೂ ಕೂಡ ಆಕೆಯ ಕುಂದುಕೊರತೆಯ ಅಹವಾಲಾಗಿರುತ್ತದೆ.ಅದರಲ್ಲಿನ ಒಕ್ಕಣೆಯು, ಸ್ವತ್ತನ್ನು ದೈವೀಕಾರ್ಯಕ್ಕಾಗಿ ದಾನ ಮಾಡಿದ್ದರೂ ಸಹ,

ಅದನ್ನು ಆತನ ಮೊದಲ ಮಗಳು ನಿರ್ವಹಿಸಬೇಕಾಗಿದ್ದು, ದೇವಸ್ಥಾನವನ್ನು ನಡೆಸಲು ಬೇಕಾಗುವ ವೆಚ್ಚಗಳನ್ನು ಸದರಿ ಸ್ವತ್ತಿನಿಂದ ಗಳಿಸಿದ ಆದಾಯದಿಂದ ಭರಿಸತಕ್ಕದ್ದು ಹಾಗೂ ಉಳಿದ ಮೊತ್ತವನ್ನು ಕುಟುಂಬದ ಸದಸ್ಯರ ಎಂದರೆ ಆತನ ಮೂವರು ಪುತ್ರಿಯರು ಹಾಗೂ ಅವರ ಮಕ್ಕಳ ಪ್ರಯೋಜನಕ್ಕಾಗಿ ಬಳಸಬೇಕಾಗಿರುತ್ತದೆ ಎಂಬುದಾಗಿ ಸೂಚಿಸಿರುತ್ತದೆ.

19. ಇದೇ ಹಿನ್ನೆಲೆಯಲ್ಲಿ, ಅರ್ಜಿದಾರಳಾದ ಸರಸ್ವತಿ ಈ ಇಬ್ಬರು ವ್ಯಕ್ತಿಗಳನ್ನು ಗೇಣಿದಾರರೆಂದು ಅಂಗೀಕರಿಸಲಾಗಿದ್ದರೆ, ಅವರನ್ನು ಅವರದ್ದೇ ಆದ ಸ್ವಂತ ಆಸ್ತಿಯ ಗೇಣಿದಾರರೆಂದು ಅಂಗೀಕರಿಸಲಾಗುತ್ತದೆ ಎಂದು ವಾದಿಸಿರುತ್ತಾಳೆ.ಆದ್ದರಿಂದ, ಅವರನ್ನು ಅವರಿಗೆ ಪ್ರಯೋಜನಕಾರಿ ಹಿತಾಸಕ್ತಿಯಿರುವ ಭೂಮಿಯ ಗೇಣಿದಾರರೆಂದು ಅಂಗೀಕರಿಸಲಾಗದು.ಎಲ್‌ಆರ್ 3/1978-79 ಹಾಗೂ ಎಲ್‌ಆರ್ 4/1978-79ಗಳಲ್ಲಿ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿದ್ದ ಅರ್ಜಿಯನ್ನು ನಿರಂಜನ್ ಮತ್ತು ಆತನ ತಾಯಿ ಶ್ರೀಮತಿ ರುಕ್ಕಿಣಿಯವರ ಗೇಣಿ ಹಕ್ಕಿನ ಪರಿಗಣನೆಗಾಗಿ ಕೈಗೆತ್ತಿಕೊಂಡ ಸಂದರ್ಭದಲ್ಲಿ ಅದನ್ನು ಪರಿಗಣಿಸಲಾಗಿರುವುದಿಲ್ಲ ಎಂಬುದು ಆಕೆಯ ಅಹವಾಲಾಗಿರುತ್ತದೆ.ಆದ್ದರಿಂದ, ಈ ಸಂಗತಿ ಹಾಗೂ ಸನ್ನಿವೇಶಗಳಲ್ಲಿ, ಶ್ರೀಮತಿ ಸರಸ್ವತಿ ಪ್ರಶ್ನಿತ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುವ ರಿಟ್ ಅರ್ಜಿಗಳಲ್ಲಿ ಮಂಡಿಸಲಾಗಿರುವ ಆಧಾರಾಂಶಗಳು ಸರಿಯಾಗಿವೆಯೆಂದು ಕಂಡು ಬರುತ್ತದೆ ಎಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿರುತ್ತದೆ.ಅಷ್ಟೇ ಅಲ್ಲದೇ, ನಿರಂಜನ್ ಹಾಗೂ ಆತನ ತಾಯಿ ಗೇಣಿ ಹಕ್ಕಿಗಾಗಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸುವಾಗ, ನಿರಂಜನ್ ಹಾಜರುಪಡಿಸಿದ ಸಾಕ್ಷ್ಯದಲ್ಲಿನ ವ್ಯತ್ಯಾಸವನ್ನು ಅಂಗೀಕರಿಸದೇ ಇರುವಲ್ಲಿ ದೋಷವುಂಟಾಗಿದೆ ಎಂಬ ವಾದಾಂಶವೂ ಸಹ ಸರಿಯಾಗಿದೆ ಎಂದು ಕಂಡುಬರುತ್ತಿದೆ.

20. ವಾಸ್ತವವಾಗಿ, ಅರ್ಜಿಯ ಹಿಂದಿನ ವಿವಾದದ ಸುತ್ತಿನಲ್ಲಿ, ಎಂದರೆ 1981 ನೇ ವರ್ಷದಲ್ಲಿ ಮಂಜೂರಾತಿಯ ಮೊದಲ ಆದೇಶವನ್ನು ಪರಿಗಣಿಸುವುದಕ್ಕೆ ಮೊದಲು, ನ್ಯಾಯಾಧಿಕರಣದ ಮುಂದಿಟ್ಟಿದ್ದ ನಡಾವಳಿಗಳಲ್ಲಿ ನಿರಂಜನ್ನ ಕಡೆಯಿಂದ ತನ್ನ ಹಾಗೂ ತನ್ನ ಸೋದರತ್ತೆ ಚಂದ್ರಾವತಿಯ ನಡುವೆ ಯಾವುದೇ ಗೇಣಿ D ದಾಖಲೆಗಳಿರುವುದಿಲ್ಲ ಮತ್ತು ತನಗೆ ಪ್ರಶ್ನಿತ ಜಮೀನುಗಳ ಸಾಗುವಳಿ ಮಾಡುವುದಕ್ಕೆ ಮೌಖಿಕವಾಗಿ ಸಮ್ಮತಿ ನೀಡಲಾಗಿರುತ್ತದೆ ಎ ೦ ದು ಸ್ಪಷ್ಟವಾಗಿ ಒಪ್ಪಿಕೊಂಡಿರಲಾಗಿರುತ್ತದೆ.ತದನಂತರ ವಾಪಸ್ಸು ಕಳುಹಿಸಲಾದ ವಿಷಯದಲ್ಲಿ, ತನ್ನ ಸಾಕ್ಷ್ಯದಲ್ಲಿ, ಗೇಣಿ ಚೀಟಿಯನ್ನು ತನಗೆ ತನ್ನ ಅತ್ತೆ ಚಂದ್ರಾವತಿ ನೀಡಿದ್ದಳೆಂದು ಅವನು ವಾದಿಸಿರುತ್ತಾನೆ.ಆರಂಭದಲ್ಲಿ ಯಾವುದೇ ಗೇಣಿ ಚೀಟಿ ಇರಲಿಲ್ಲವೆಂದು ಒಪ್ಪಿಕೊಂಡು, ತರುವಾಯದಲ್ಲಿ ಗೇಣಿ ಹಕ್ಕನ್ನು ತನ್ನ ಹಾಗೂ ತನ್ನ ತಾಯಿಯ ಪರವಾಗಿ ನೀಡಿರುವ ಗೇಣಿ ಚೀಟಿಯೊಂದಿಗೆ ಸಮರ್ಥಿಸಲಾಗಿದೆಯೆಂದು ಕ್ಲೇಮು ಮಾಡಿಕೊಳ್ಳುವ ದಾಖಲೆಯನ್ನು ಹಾಜರುಪಡಿಸಿರುವಲ್ಲಿನ ಸದರಿ ಅಸಂಗತತೆಯು ಅದರ ನೈಜತೆಯ ಕುರಿತಾಗಿ ಸಂದೇಹವನ್ನು ಸೃಷ್ಟಿಸುತ್ತಿದ್ದು, ಇದನ್ನು ನ್ಯಾಯಾಧಿಕರಣವು ಪರಿಗಣಿಸಿರುವುದಿಲ್ಲ.ಈ ಹಿನ್ನೆಲೆಯಲ್ಲಿ ಈ ನ್ಯಾಯಾಲಯವು, ಆದಿರಾಜ ಪಾಂಡ್ಯನ ಕುಟುಂಬಕ್ಕೆ ಸೇರಿದ್ದ, ಅವನ ಎಲ್ಲಾ ಹೆಣ್ಣುಮಕ್ಕಳ ಹಾಗೂ ಅವರ ಉತ್ತರಾಧಿಕಾರಿಗಳ ಪ್ರಯೋಜನಕ್ಕಾಗಿ ಲಭ್ಯವಿದ್ದ ಜಮೀನುಗಳಿಗೆ ತಾವು ಗೇಣಿದಾರರೆಂದು ಕ್ಲೇಮು ಮಾಡಿಕೊಂಡು ಅರ್ಜಿದಾರಳಾದ ಸರಸ್ವತಿಯ ಸೋದರತ್ತೆಯ ಮಗ ಹಾಗೂ ಸೋದರತ್ತೆ ಎಂದರೆ ನಿರಂಜನ್ ಹಾಗೂ ರುಕ್ಕಿಣಿ ಇವರು ಸಲ್ಲಿಸಿದ ಅರ್ಜಿಗಳನ್ನು ಅಂಗೀಕರಿಸುವಲ್ಲಿ ನ್ಯಾಯಾಧಿಕರಣವು ಗಂಭೀರ ತಪ್ಪನ್ನೆಸಗಿರುತ್ತದೆ ಎಂಬ ಅಭಿಪ್ರಾಯವನ್ನು ತಳೆದಿರುತ್ತದೆ.ಒಂದೊಮ್ಮೆ ಅವರ ಕೇಮನ್ನು ಸಮರ್ಪಕ ಪರಿಶೀಲನೆಯನ್ನು ನಡೆಸದೇ ಅಂಗೀಕರಿಸಲಾಗಿದ್ದರೆ, ಅದು ಅರ್ಜಿದಾರರ ಪ್ರತ್ಯೇಕ ಪ್ರಯೋಜನಕ್ಕಾಗಿ ದೊರಕಿರುತ್ತದೆ.

21. ಈ ಹಿನ್ನೆಲೆಯಲ್ಲಿ, ಇಂದಿರಾ ಸಲ್ಲಿಸಿರುವ ಮೊದಲ ರಿಟ್ ಅರ್ಜಿಗಳನ್ನು ನೋಡಿದಾಗ,ದಿನಾಂಕ: 3.4.2012 ರ ಎಲ್‌ಆರ್ಯ್ ಹಾಗೂ 4/1978-79ಗಳಲ್ಲಿನ ಸಾಮಾನ್ಯ ಆದೇಶವನ್ನು ಪ್ರಶ್ನಿಸುವಾಗ ಅರ್ಜಿದಾರಳಾದ ಇಂದಿರಾ ತನ್ನ ತಾಯಿಯ ಹೆಸರಿನಲ್ಲಿ ಜಮೀನಿನ ಎರಡು ಬಾಬುಗಳನ್ನು ಪರಿಗಣಿಸದಿರುವ ಬಗ್ಗೆ ಪ್ರಸ್ತಾಪಿಸಿರುತ್ತಾಳೆ.ಆದರೆ ಆಕೆಯ ಸಹೋದರನ ಹೆಸರಿನಲ್ಲಿ ಪರಿಗಣಿಸಲಾಗಿರುವ ಗೇಣಿಯ ಬಗ್ಗೆ ಆಕೆ ಏನನ್ನೂ ಹೇಳಿರುವುದಿಲ್ಲ ಎಂಬುದಕ್ಕೆ ಸಂಬಂಧಪಡುವಷ್ಟರ ೧ ಮಟ್ಟಿಗೆ ಇಂದಿರಾ ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನಿರಂಜನ್ ತಾನೇ ರೂಪಿಸಿರುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ.ಆದ್ದರಿಂದ, ಕುಟುಂಬಕ್ಕಾಗಿ ಲಭ್ಯವಿರುವ ಎಲ್ಲಾ ಸ್ವತ್ತುಗಳನ್ನು ತಮ್ಮದೇ ಪ್ರತ್ಯೇಕ ಪ್ರಯೋಜನಕ್ಕಾಗಿ ಸಂಗ್ರಹಿಸಲು ಯತ್ನಿಸುವಲ್ಲಿ ಆದಿರಾಜ ಪಾಂಡ್ಯನ ಮೂರನೇ ಮಗಳಾದ ರುಕ್ಕಿಣಿಯ ಗುಂಪಿನ ಕಡೆಯಿಂದ ಕಲೆತು ಯೋಚಿಸಿದ ಪ್ರಯತ್ನವಿದೆ ಎಂಬುದು ಸ್ಪಷ್ಟವಾಗುತ್ತದೆ.

22. ಆದ್ದರಿಂದ, ಈ ಹಿನ್ನೆಲೆಯಲ್ಲಿ, ಭೂ ನ್ಯಾಯಾಧಿಕರಣವು ಹೊರಡಿಸಿದ ಆದೇಶವನ್ನು ಗಮನಿಸಿದಾಗ,ದಿನಾಂಕ: 03.04.2012 ರಂದು ಎಲ್ಆರ್ 3/1978-79 ಹಾಗೂ ಎಲ್ಆರ್ವೈ 4/1978-79 ಗಳಲ್ಲಿ ಹೊರಡಿಸಿರುವ ತನ್ನ ಸಾಮಾನ್ಯ ಆದೇಶದಲ್ಲಿ ನ್ಯಾಯಾಧಿಕರಣವು ಗಂಭೀರ ಲೋಪವನ್ನು ಎಸಗಿರುತ್ತದೆ.ಆದ್ದರಿಂದ ಸದರಿ ನಡಾವಳಿಗಳಲ್ಲಿ ಪ್ರತಿವಾದಿಸುತ್ತಿರುವ ಪ್ರತ್ಯರ್ಜಿದಾರರು ಮಂಡಿಸಿರುವ ಈ ಹಿಂದೆ ಹೇಳಿರುವ ಆಧಾರಾಂಶಗಳ ಹಿನ್ನೆಲೆಯಲ್ಲಿ ನ್ಯಾಯಾಧಿಕರಣವು ಅದನ್ನು ಮರುಪರಿಗಣಿಸುವುದು ಅಗತ್ಯವಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

23. ಆದ್ದರಿಂದ, ಎಲ್ಆರ್ 3 ಮತ್ತು 4/1978-79ಗಳಲ್ಲಿ ಭೂ ನ್ಯಾಯಾಧಿಕರಣ, ಬೆಳ್ತಂಗಡಿ,ದಿನಾಂಕ: 3.4.2012 ರಂದು ಹೊರಡಿಸಿದ್ದ ಪ್ರಶ್ನಿತ ಸಾಮಾನ್ಯ ಆದೇಶವನ್ನು ಈ ಮೂಲಕ ರದ್ದುಪಡಿಸಲಾಗಿದೆ ಮತ್ತು ಸದರಿ ನಡಾವಳಿಗಳನ್ನು ಆದಿರಾಜ ಪಾಂಡ್ಯನ ಮತ್ತೊಬ್ಬ ಮೊಮ್ಮಗಳಿಂದ ಪ್ರತಿವಾದಿಸುತ್ತಿರುವ ಪ್ರತ್ಯರ್ಜಿದಾರಳಾದ ಶ್ರೀಮತಿ ಸರಸ್ವತಿ ಆತನ ಎರಡನೇ ಮಗಳಾದ ರತ್ನಾವತಿಯ ಮೂಲಕ ಎತ್ತಿರುವ ಆಕ್ಷೇಪಣೆಯನ್ನು ಮರು ಪರಿಗಣನೆಗಾಗಿ ನ್ಯಾಯಾಧಿಕರಣಕ್ಕೆ ವಾಪಸ್ಸು ಕಳುಹಿಸಲಾಗಿದೆ.ಆದಾಗ್ಯೂ, ಸದರಿ ಸರಸ್ವತಿಯು ಬದುಕುಳಿದಿಲ್ಲ ಹಾಗೂ ಆಕೆಯು ಪ್ರಾರಂಭಿಸಿದ್ದ ನಡಾವಳಿಗಳನ್ನು ಆಕೆಯ ಕಾನೂನು ಸಮ್ಮತ ಉತ್ತರಾಧಿಕಾರಿಗಳು ಮುಂದುವರೆಸಿರುತ್ತಾರೆ ಎಂಬುದನ್ನು ಗಮನಿಸಲಾಗಿದೆ.ಆದ್ದರಿಂದ, ಭೂ ನ್ಯಾಯಾಧಿಕರಣದ ಮುಂದಿಟ್ಟಿರುವ ವಾಪಸ್ ಕಳುಹಿಸಲಾಗಿರುವ ನಡೆವಳಿಗಳಲ್ಲಿ ಮೃತ ಶ್ರೀಮತಿ ಸರಸ್ವತಿಯ ಕಾನೂನು ಸಮ್ಮತ ಪ್ರತಿನಿಧಿಗಳಿಗೂ ಸಹ ಸಾಕ್ಷ್ಯದಲ್ಲಿ ಹಾಜರಾಗಿ ಗೇಣಿ ಹಕ್ಕನ್ನು ಕ್ಲೇಮು ಮಾಡಲಾಗಿರುವ ಸದರಿ ಸ್ವತ್ತುಗಳು ಸ್ವತಃ ಅರ್ಜಿದಾರರ ಕುಟುಂಬದ ಸ್ವತ್ತಾಗಿರುತ್ತದೆ ಎಂದು ರುಜುವಾತು ಪಡಿಸುವ ಸಲುವಾಗಿ ನೋಟೀಸನ್ನು ನೀಡಬೇಕಾಗಿರುತ್ತದೆ.

24. ಅಂತಹ ಅಭಿಪ್ರಾಯದೊಂದಿಗೆ, ಎಲ್ಆರ್ವೈ 3/1978-79 ಹಾಗೂ ಎಲ್ಆರ್ 4/1978-79ಗಳಲ್ಲಿ ಭೂ ನ್ಯಾಯಾಧಿಕರಣವು ಹೊರಡಿಸಿರುವದಿನಾಂಕ: 3.4.2012 ರ ಸಾಮಾನ್ಯ ಆದೇಶವನ್ನು ಹಾಗೂ ಅಧಿಭೋಗದ ಹಕ್ಕಿಗಾಗಿ ಸುಂದರ ಪೂಜಾರಿ ಹಾಗೂ ರುಕ್ಕಿಣಿ ಯಾವುದಕ್ಕೆ ಸಂಬಂಧಿಸಿದಂತೆ ಎರಡು ಅರ್ಜಿಗಳನ್ನು ಸಲ್ಲಿಸಿದ್ದರೋ, ಆ ಜಮೀನುಗಳ ಎರಡು ಬಾಬುಗಳಿಗೆ ಸಂಬಂಧಿಸಿದಂತೆ ಅಧಿಭೋಗದ ಹಕ್ಕುಗಳನ್ನು ಕೋರಿ ಸುಂದರ ಪೂಜಾರಿ ಸಲ್ಲಿಸಿದ್ದ ಎಲ್ಆರ್ವೈ 18/1974-75ರಲ್ಲಿನ ಆದೇಶವನ್ನೂ ಸಹ ರದ್ದುಪಡಿಸಲಾಗಿದೆ.ಮೇಲೆ ಹೇಳಿರುವ ಮೂರು ಎಲ್ಆರ್ ನಡೆವಳಿಗಳನ್ನು ಹೊಸ ಪರಿಗಣನೆಗಾಗಿ ಭೂ ನ್ಯಾಯಾಧಿಕರಣ, ಬೆಳ್ತಂಗಡಿಗೆ ವಾಪಸ್ ಕಳುಹಿಸಲಾಗಿದೆ.ಭೂ ನ್ಯಾಯಾಧಿಕರಣ ಬೆಳ್ತಂಗಡಿ, ನಮೂನೆ ಸಂ .7 ರಲ್ಲಿ ಭರಿಸಿರುವ ಈ ಮೂರು ಅರ್ಜಿಗಳನ್ನು ಪುನರ್ ಆರಂಭಿಸತಕ್ಕದ್ದು ಮತ್ತು ಅದನ್ನು ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗೆ ಆದ್ಯತೆಯ ಆಧಾರದಲ್ಲಿ ವಿಲೇ ಮಾಡತಕ್ಕದ್ದು ಎಂದು ಹೇಳುವುದು ಅನಾವಶ್ಯಕವಾಗಿರುತ್ತದೆ.ಇದನ್ನೇ ಮೇಲೆ ಉದಾಹರಿಸಿರುವ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಮರು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ.